# ಬಂಗಾರದ ತೋಳಿನ ಮನುಷ್ಯ



■ ಪ್ರವೀಣ ಕುಲಕರ್ಣಿ

ಆಸ್ಟ್ರೇಲಿಯಾದ ಕಡಲ ಕಿನಾರೆಯ ಜೂನಿ ಎಂಬ ಪುಟ್ಟ ಪಟ್ಟಣದ ಈ ತಾತ ಮೇಲ್ನೋಟಕ್ಕೆ ಸಾಮಾನ್ಯ ವ್ಯಕ್ತಿಯಂತೆಯೇ ಇದ್ದರು. ಮೊಮ್ಮಕ್ಕಳ ಜೊತೆ ಆಟ ಆಡುವುದು, ನಿತ್ಯ ಸಂಜೆ ಸಮುದ್ರದ ಅಲೆಗಳಿಗೆ ಸಮಾನಾಂತರವಾಗಿ ಒಂದು ದೀರ್ಘ ವಾಕ್ ಮಾಡುವುದು, ಅಂಚೆಚೀಟಿ ಸಂಗ್ರಹಿಸುವುದು, ಕೈತೋಟದಲ್ಲಿ ಕಾಲ ಕಳೆಯುವುದು... ಇಂತಹ ಪುಟ್ಟ ಪುಟ್ಟ ಕೆಲಸಗಳಲ್ಲೇ ಖುಷಿ ಕಾಣುತ್ತಾ ಜೀವನ ಸಾಗಿಸಿದ್ದರು. ಅಷ್ಟುಮಾತ್ರಕ್ಕೆ ದಾರಿಹೋಕರು ಭಾವಿಸಿದಂತೆ ಅವರೇನು ಸಾಮಾನ್ಯ ವ್ಯಕ್ತಿಯಾಗಿರಲಿಲ್ಲ. ಸಾಮಾನ್ಯರಲ್ಲೇ ಅಸಾಮಾನ್ಯರಾಗಿದ್ದರು. 24 ಲಕ್ಷ ಶಿಶುಗಳ ಜೀವ ಉಳಿಸಲು ಕಾರಣರಾಗಿದ್ದ ಅವರು, ಅಷ್ಟೊಂದು ಕಂದಮ್ಮಗಳು ಮತ್ತು ಅವುಗಳ ಕುಟುಂಬಗಳ ಪಾಲಿಗೆ ದೇವರೇ ಆಗಿದ್ದರು. ದೇವರಲ್ಲದೆ ಮತ್ತೇನು? ಈ ತಾತನ ನಾಳಗಳಿಂದ ಹರಿದ ರಕ್ತದ ಕಣಗಳೇ ಅಲ್ಲವೇ, ಆ ಜೀವಗಳನ್ನೆಲ್ಲ ಉಳಿಸಿದ್ದು!

'ಬಂಗಾರದ ತೋಳಿನ ಮನುಷ್ಯ' ಎಂದೇ ಖ್ಯಾತರಾಗಿದ್ದ ಜೇಮ್ಸ್ ಹ್ಯಾರಿಸನ್ ತಾತ ವಯೋಸಹಜ ಕಾರಣದಿಂದ ಕಳೆದ ತಿಂಗಳು ತೀರಿಕೊಂಡಾಗ ಆಸ್ಟ್ರೇಲಿಯಾ ಮಾತ್ರವಲ್ಲದೆ, ಜಗತ್ತಿನ ಹಲವು ದೇಶಗಳ ಲಕ್ಷಾಂತರ ಮನೆಗಳಲ್ಲಿ ಅವರ ಸ್ಮರಣೆಗಾಗಿ ಮೊಂಬತ್ತಿಗಳು ಬೆಳಗಿದವು. ಜೇಮ್ಸ್, ತಮ್ಮ 18ನೇ ವಯಸ್ಸಿನಿಂದ 81ನೇ ವಯಸ್ಸಿನವರೆಗೆ (ಆಸ್ಟ್ರೇಲಿಯಾದಲ್ಲಿ ಕಾನೂನುಬದ್ಧವಾಗಿ ಅನುಮತಿ ಇರುವ ವಯೋಮಿತಿ) 1,173 ಬಾರಿ ರಕ್ತದಾನ ಮಾಡಿದ್ದರು. ಅಂದರೆ, ಅರವತ್ತು ವರ್ಷಗಳ ತನಕ ಪ್ರತಿ ಎರಡು ವಾರಕ್ಕೊಮ್ಮೆ ಅವರು ತಪ್ಪದೇ ರಕ್ತದಾನ ಮಾಡುತ್ತಿದ್ದರು. ಈ ತಾತನ ರಕ್ತದಾನದ ಮಹತ್ವ ತಿಳಿಯಬೇಕಾದರೆ ಆಸ್ಟ್ರೇಲಿಯಾದ ಆ ಗಂಡಾಂತರಕಾರಿ ವಿದ್ಯಮಾನದ ಪುಟ್ಟ ಚರಿತ್ರೆಯನ್ನು ನಾವು ಅರಿಯಲೇಬೇಕು. 1967ಕ್ಕಿಂತ ಮೊದಲು ಆ ದೇಶದಲ್ಲಿ ರೀಸಸ್ (**RhD negative**) ಎಂಬ ಕಾಯಿಲೆಯ ರಾಜ್ಯಭಾರ ಜೋರಾಗಿತ್ತು. ಭ್ರೂಣಾವಸ್ಥೆಯಲ್ಲಿರುವ ಶಿಶುವಿನ ರಕ್ತದ ಕಣಗಳ ಮೇಲೆ ಆ ಶಿಶುವಿನ ಅಮ್ಮನ ರಕ್ತದ ಕಣಗಳೇ ದಾಳಿ ಮಾಡುವಂತಹ ವಿರಳ ಕಾಯಿಲೆ ಇದು. ಅಮ್ಮನ ರಕ್ತದ ಕಣಗಳು ರೀಸಸ್ ನೆಗೆಟಿವ್ ಆಗಿದ್ದು, ಶಿಶುವಿನ ರಕ್ತದ ಕಣಗಳು ರೀಸಸ್ ಪಾಸಿಟಿವ್ ಆಗಿದ್ದಾಗ ಕಾಣಿಸಿಕೊಳ್ಳುವ ಆರೋಗ್ಯ ಸಮಸ್ಯೆ ಇದಾಗಿದೆ. ರೀಸಸ್‌ನಿಂದಾಗಿ ಪ್ರತಿವರ್ಷ ಅಸಂಖ್ಯ ಶಿಶುಗಳು ಭ್ರೂಣಾವಸ್ಥೆಯಲ್ಲೇ ಅಸುನೀಗುತ್ತಿದ್ದವು. ಇದೇ ಕಾರಣದಿಂದ ಕಾಂಗರೂ ನಾಡಿನಲ್ಲಿ ಗರ್ಭಪಾತಗಳ ಪ್ರಮಾಣವೂ ಭಾರಿ ಪ್ರಮಾಣದಲ್ಲಿತ್ತು.

ಹದಿನೆಂಟರ ಹರೆಯಕ್ಕೆ ಕಾಲಿಟ್ಟ ಮೇಲೆ ಜೇಮ್ಸ್ ಹ್ಯಾರಿಸನ್ ರಕ್ತದಾನ ಮಾಡಲು ಹೋದಾಗ ವೈದ್ಯರು ಸಂಜೀವಿನಿಯೇ ಸಿಕ್ಕಂತೆ ಕುಣಿದಾಡಿದರು. ಜೇಮ್ಸ್ ಅವರ ರಕ್ತದಲ್ಲಿ ರೀಸಸ್ ಕಾಯಿಲೆಗೆ ರಾಮಬಾಣವಾಗಬಲ್ಲ, ಶಿಶುಗಳ ರಕ್ತದಲ್ಲಿ ಪ್ರತಿಕಾಯಗಳನ್ನು ಸೃಷ್ಟಿಸಬಲ್ಲ ಪ್ಲಾಸ್ಮಾ ಪತ್ತೆಯಾಗಿತ್ತು. ತುಂಬಾ ವಿರಳವಾಗಿ ಸಿಗುವ ಅವಕಾಶ ಇದು. ಅವರ ರಕ್ತದಿಂದ ತೆಗೆದ ಪ್ಲಾಸ್ಮಾದ ಸಹಾಯದಿಂದ ಆ್ಯಂಟಿ–ಡಿ ಚುಚ್ಚುಮದ್ದು ಸೃಷ್ಟಿಸಿದ ವೈದ್ಯರು, ಅದನ್ನು ಗರ್ಭಿಣಿಯರ ಮೇಲೆ ಪ್ರಯೋಗಿಸಿದಾಗ ಚಮತ್ಕಾರವೇ ನಡೆದಿತ್ತು. ಭ್ರೂಣಾವಸ್ಥೆಯಲ್ಲಿ ಶಿಶುಗಳು ಸಾಯುವ ಸಮಸ್ಯೆ ನೀಗಿ, ಕಂದಮ್ಮಗಳು ಅಮ್ಮಂದಿರ ಗರ್ಭದಿಂದ ಹೊರಬಂದು ಕಣ್ಣು ಬಿಡತೊಡಗಿದವು. 1960ರ ದಶಕದಲ್ಲಿ ಜೇಮ್ಸ್ ರಕ್ತದಿಂದ ಅಲ್ಲಿನ ವೈದ್ಯಕೀಯ ಲೋಕದಲ್ಲಿ ದೊಡ್ಡದೊಂದು ಜಾದೂ ಆಗಿತ್ತು. ಆಸ್ಟ್ರೇಲಿಯಾದ ರೆಡ್‌ಕ್ರಾಸ್ ಸಂಸ್ಥೆಯ ಅಧಿಕೃತ ದಾಖಲೆಗಳ ಪ್ರಕಾರ, ಜೇಮ್ಸ್ ಅವರ ರಕ್ತದಲ್ಲಿನ ಪ್ಲಾಸ್ಮಾದಿಂದ 24 ಲಕ್ಷ ಶಿಶುಗಳಿಗೆ ಜೀವದಾನ ಸಿಕ್ಕಿದೆ. 'ಪ್ರತಿಯೊಂದು ರಕ್ತದ ಬ್ಯಾಗ್ ಅಮೂಲ್ಯವಾದುದು. ಅದೇ, ಜೇಮ್ಸ್ ಅವರ ರಕ್ತದ ಮಹತ್ವ ಬಣ್ಣನೆಗೆ ನಿಲುಕದ್ದು' ಎನ್ನುತ್ತಾರೆ ರೆಡ್‌ಕ್ರಾಸ್ ಸಂಸ್ಥೆಯ ಪ್ರತಿನಿಧಿಗಳು. ರೀಸಸ್ ಕಾಯಿಲೆ ಹೊಂದಿದ ಆಸ್ಟ್ರೇಲಿಯಾದ ಮಹಿಳೆಯರ ಪ್ರಮಾಣ ಶೇ.17ರಷ್ಟು ಎಂದು ಅಂದಾಜಿಸಲಾಗಿದೆ. ಎಲ್ಲರಿಗೂ ಈ 'ಬಂಗಾರದ ತೋಳಿನ ಮನುಷ್ಯ' ಸಹಾಯಹಸ್ತ ಚಾಚಿದ್ದಾರೆ. ದೊಡ್ಡ ಆರೋಗ್ಯ ಗಂಡಾಂತರದಿಂದ ನೋವಿಲ್ಲದೆ, ಖರ್ಚಿಲ್ಲದೆ ಸ್ತ್ರೀಸಂಕುಲವನ್ನು ಪಾರು ಮಾಡಿದ ಶ್ರೇಯ ಈ ತಾತನದ್ದಾಗಿದೆ.

ಜೇಮ್ಸ್ ಅವರು 14ರ ಹರೆಯದಲ್ಲಿದ್ದಾಗ ಶ್ವಾಸಕೋಶ ಸಂಬಂಧಿ ಸಮಸ್ಯೆಗೆ ತುತ್ತಾಗಿ ದೊಡ್ಡ ಶಸ್ತ್ರಚಿಕಿತ್ಸೆಯೊಂದಕ್ಕೆ ಒಳಗಾದರು. ಆಗ, ಅವರಿಗೆ ಬೇಕಾಗಿದ್ದ 13 ಲೀಟರ್ ರಕ್ತವನ್ನು ದಾನಿಗಳು ನೀಡಿದ್ದರು. ಶಸ್ತ್ರಚಿಕಿತ್ಸಾ ಕೊಠಡಿಯಿಂದ ಹೊರಬಂದು ಚೇತರಿಸಿಕೊಂಡ ನನಗೆ ನನ್ನ ತಂದೆ ಹೇಳಿದ ಮೊದಲ ಮಾತೆಂದರೆ, 'ದಾನಿಗಳು ನೀಡಿದ ದೊಡ್ಡ ಪ್ರಮಾಣದ ರಕ್ತ ನಿನ್ನನ್ನು ಉಳಿಸಿದೆ' ಎಂದು. ನಾನು ಹರೆಯಕ್ಕೆ ಬಂದ ದಿನದಿಂದಲೇ ರಕ್ತದಾನ ಮಾಡಲು ಆರಂಭಿಸುವೆ ಎಂದು ಆ ಕ್ಷಣವೇ ಶಪಥ ಮಾಡಿದೆ ಎಂದು ಈ ತಾತ ಹೇಳುತ್ತಿದ್ದರು. ಈ ಸಾಧಕನಿಗೆ ಆಸ್ಟ್ರೇಲಿಯಾ ಸರ್ಕಾರದ ಪ್ರಮುಖ ಪ್ರಶಸ್ತಿಗಳೆಲ್ಲ ಸಂದಿವೆ. ಅಲ್ಲಿನ ಸಮಾಜವಂತೂ ಅವರನ್ನು ತುಂಬು ಅಭಿಮಾನದಿಂದ ಕಂಡಿದೆ. ಕೃತಜ್ಞತೆಯಿಂದ ಅವರಿಗೆ ಕೈಮುಗಿದಿದೆ. ಜೇಮ್ಸ್ ಅವರಿಗೆ ಸೂಜಿ ಎಂದರೆ ಚಿಕ್ಕಂದಿನಿಂದಲೂ ಭಯವಿತ್ತಂತೆ. ಹತ್ತಿರ ಹತ್ತಿರ 1200 ಬಾರಿ ರಕ್ತದಾನ ಮಾಡಿದರೂ ಒಮ್ಮೆಯೂ ಸೂಜಿ ಚುಚ್ಚುವುದನ್ನು ಅವರು ನೋಡಿರಲಿಲ್ಲವಂತೆ. ರಕ್ತ ಸಂಗ್ರಹಿಸಲು ಸೂಜಿ ಚುಚ್ಚುವಾಗ ನಾನು ನರ್ಸ್ ಅವರನ್ನು ನೋಡುತ್ತಿದ್ದೆ. ಇಲ್ಲದಿದ್ದರೆ ಮೇಲೆ ದಿಟ್ಟಿಸುತ್ತಿದ್ದೆ ಎಂದು ಅವರು ಹೇಳುತ್ತಿದ್ದರು. ಸೂಜಿಗೆ ಅಂಜುತ್ತಿದ್ದ ಮನುಷ್ಯ, ತನ್ನ ದೇಶದ ದೊಡ್ಡ ಜನಸಂಖ್ಯೆಯನ್ನು ನೋವಿನಿಂದ ದೂರ ಮಾಡಿದ ಕಥೆ ಎಲ್ಲರಿಗೂ ಪ್ರೇರಣೆ ನೀಡುವಂಥದ್ದು, ಅಲ್ಲವೇ? ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.

Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,

Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.

RNI No 7891/65